**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.684/2014**

ಪಿ.ಡಬ್ಲ್ಯೂ: 17

ಸಿ.ಡಬ್ಲ್ಯೂ: 17

ಸಾಕ್ಷಿದಾರರ ಹೆಸರು : ದೇವರಾಜ್

ತಂದೆಯ ಹೆಸರು : ಲೇಟ್ ಮರುಳಸಿದ್ದಪ್ಪ

ವಯಸ್ಸು : 67 ವರ್ಷ

ಉದ್ಯೋಗ : ನಿವೃತ್ತ ಅಧಿಕಾರಿ

ವಾಸಸ್ಥಳ : ಕಡೂರು

**ದಿನಾಂಕ: 14-09-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ**

2014 ರಲ್ಲಿ ಲಕ್ಕವಳ್ಳಿ ಪೊಲೀಸರು ಬಾವಿಕೆರೆ ಪಂಚಾಯಿತಿಯಲ್ಲಿ ಅಕ್ರಮವಾಗಿ ಖಾತೆ ಬದಲಾವಣೆ ಮಾಡಿರುವ ಬಗ್ಗೆ ವರದಿ ಕೇಳಿದ್ದು, ನಾನು ಕಡತವನ್ನು ಪರಿಶೀಲಿಸಿ ಪೊಲೀಸರಿಗೆ ವರದಿ ನೀಡಿರುತ್ತೇನೆ. ನಾನು ದಿ: 30-01-2014 ರಂದು ಬಾವಿಕೆರೆ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಕಡತವನ್ನು ಪರಿಶೀಲಿಸಿ ವಿಚಾರಣಾ ತನಿಖಾ ವರದಿಯನ್ನು ಪೊಲೀಸರಿಗೆ ನೀಡಿರುತ್ತೇನೆ. ನಾನು ಪರಿಶೀಲಿಸಿದಾಗ ಅಸಸ್ ಮೆಂಟ್ ಸಂಖ್ಯೆ 2ಎ ಮತ್ತು 2ಬಿ ನಲ್ಲಿರುವ ಬರವಣಿಗೆ ಹಾಗೂ 2ಸಿ ಮತ್ತು 2ಡಿ, 2ಇ ನಲ್ಲಿ ಆಗಿರುವ ಬರವಣಿಗೆ ಹಾಗೂ ಅದರ ಮುಂದೆ ದಾಖಲಾದ ಬರವಣಿಗೆಗಳಲ್ಲಿ ವ್ಯತ್ಯಾಸ ಕಂಡುಬಂದಿರುತ್ತದೆ. ನನ್ನ ಅಭಿಪ್ರಾಯದಲ್ಲಿ ಅಸಸ್ ಮೆಂಟ್ ಸಂಖ್ಯೆ 2ಸಿ, 2ಡಿ, 2ಇ ಸಂಖ್ಯೆಗಳನ್ನು ಮಧ್ಯದಲ್ಲಿ ಸೇರ್ಪಡೆ ಗೊಳಿಸಿರುವುದು ಕಂಡುಬಂದಿರುತ್ತದೆ. ಸದರಿ ಸಂಖ್ಯೆಗಳು ಸಂದೇಶ್ ಶೆಟ್ಟಿ, ವೆಂಕಟೇಶ್ ಮತ್ತು ಸೀತಾರಾಮ ರವರ ಹೆಸರಿನಲ್ಲಿ ನಮೂದು ಮಾಡಿರುವುದು ಕಂಡುಬಂದಿರುತ್ತದೆ. ಸಂದೇಶ್ ಶೆಟ್ಟಿಯ ಹೆಸರಿನಲ್ಲಿ 35 ಇಂಟು 70, ವೆಂಕಟೇಶ್ ಹೆಸರಿನಲ್ಲಿ 35 ಇಂಟು 70, ಸೀತಾರಾಮ ಹೆಸರಿನಲ್ಲಿ 40 ಇಂಟು 70 ವಿಸ್ತೀರ್ಣದ ನಿವೇಶನ ನಮೂದು ಮಾಡಿರುವುದು ಕಂಡುಬಂದಿರುತ್ತದೆ. ಸದರಿ ಅಸಸ್ ಮೆಂಟ್ ಸಂಖ್ಯೆಗಳನ್ನು ಸೇರ್ಪಡೆ ಮಾಡಿದ್ದಕ್ಕಾಗಿ ಯಾವುದೇ ಸಭಾ ನಡವಳಿಕೆಗಳು ಆಗಿರುವ ಬಗ್ಗೆ ದಾಖಲೆಗಳು ಹಾಗೂ ಮ್ಯೂಟೇಷನ್ ಗಳು ದಾಖಲೆಗಳು ಸಿಕ್ಕಿರುವುದಿಲ್ಲ. ಸದರಿ ನಿವೇಶನದ ಸ್ವತ್ತುಗಳು ತೋಟಗಾರಿಕೆ ಇಲಾಖೆಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವಂತಹ ಸ್ವತ್ತುಗಳು ಎಂದು ತಿಳಿದು ಬಂದಿದೆ. ಸದರಿ ಅಂಶಗಳನ್ನು ವರದಿಯಲ್ಲಿ ತಯಾರಿಸಿ ನಾನು ಪೊಲೀಸರಿಗೆ ನೀಡಿರುತ್ತೇನೆ. ಸಾಕ್ಷಿಯು ವರದಿಯ ಎರಡು ಪುಟಗಳಲ್ಲಿ ನೋಡಿ ಗುರುತಿಸಿದ್ದು, ಸದರಿ ವರದಿಯ ಪುಟಗಳನ್ನು ಕ್ರಮವಾಗಿ ನಿಪಿ-9 ಮತ್ತು ನಿಪಿ-10 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-9(ಎ) ಮತ್ತು ನಿಪಿ-10(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : 1ನೇ ಆರೋಪಿ ಪರ ಶ್ರೀ ಎ ಆರ್ ಕೆ ವಕೀಲರಿಂದ.**

ನಾನು ಪಂಚಾಯಿತಿ ಕಛೇರಿಯಲ್ಲಿನ ಸಿಬ್ಬಂದಿಯನ್ನು ವಿಚಾರಿಸಿರುತ್ತೇನೆ. ಪೊಲೀಸರು ಹೇಳಿದ್ದಕ್ಕೆ ನಾನು

ವಿಚಾರಣಾ ವರದಿಯನ್ನು ತಯಾರಿಸಿದ್ದು, ಕೆ ಚನ್ನಪ್ಪ ಎನ್ನುವವರ ಬಗ್ಗೆ ನನಗೆ ಗೊತ್ತಿಲ್ಲ. ಪೊಲೀಸರು ನನಗೆ ನೀಡಿದ ಮನವಿ ಪ್ರತಿ ಪಂಚಾಯಿತಿ ದಾಖಲಾತಿಗಳಲ್ಲಿ ಇರುತ್ತದೆ. ನನಗೆ ಪೊಲೀಸರಿಂದ ಯಾವುದೇ ಮನವಿ ಪತ್ರ ನೀಡಿರಲಿಲ್ಲ ಎಂದರೆ ಸರಿಯಲ್ಲ. ಕಡತದಲ್ಲಿ ಬರವಣಿಗೆ ವ್ಯತ್ಯಾಸ ಇರುವ ಬಗ್ಗೆ ತಜ್ಞರ ಅಭಿಪ್ರಾಯ ಪಡೆದಿಲ್ಲ. ನಾನು ಕಡತ ಪರಿಶೀಲಿಸಿದಾಗ ಮ್ಯೂಟೇಷನ್ ರಿಜಿಸ್ಟರ್ ಪುಸ್ತಕ ಹಾಗೂ ಸಭಾ ನಡವಳಿಕೆ ಪುಸ್ತಕ ಸಿಕ್ಕಿರುವುದಿಲ್ಲ. ಗ್ರಾಮ ಪಂಚಾಯಿತಿ ಪಿಡಿಓ ರವರಿಗೆ ಪುಸ್ತಕಗಳನ್ನು ಹಾಜರುಪಡಿಸಲು ಆದೇಶ ನೀಡಿರುವುದಿಲ್ಲ. ನಾನು ತನಿಖಾ ವರದಿಗೆ ಪಿಡಿಓ ರವರ ಸಹಿ ಪಡೆದಿಲ್ಲ. ನಾನು ಖುದ್ದು ಪರಿಶೀಲನೆ ನಡೆಸದೆ ಪೊಲೀಸರ ಕೋರಿಕೆಯ ಮೇರೆಗೆ ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ವೆಂಕಟೇಶ, ಸಂದೇಶ್ ಶೆಟ್ಟಿ ಮತ್ತು ಸೀತರಾಮುರವರು ನಿವೇಶನ ಮಂಜೂರು ಕೋರಿ ಅರ್ಜಿ ಸಲ್ಲಿಸಿರುವ ಬಗ್ಗೆ ದಾಖಲೆಯನ್ನು ನಾನು ನೋಡಿಲ್ಲ. ನಾನು ಸುಳ್ಳು ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

***<u>ಪಾಟೀ ಸವಾಲು : 2ನೇ ಆರೋಪಿ ಪರ ಶ್ರೀ ಕೆ ಸಿ ವಕೀಲರಿಂದ.</u>***

ಕಡತದ ಬರವಣಿಗೆಯಲ್ಲಿ ವ್ಯತ್ಯಾಸ ಆದ ಬಗ್ಗೆ ಪಿಡಿಓ ರವರ ಸಹಿ ಇರುವುದರಿಂದ ಅವರೇ ಬರೆದಿರುತ್ತಾರೆಂದು ಹೇಳಬಹುದಾಗಿದೆ. ಆರೋಪಿತರೇ ಬರವಣಿಗೆಯನ್ನು ಮಾಡಿದ್ದಾರೆಂದು ಹೇಳಲಾಗುವುದಿಲ್ಲ. ತೋಟಗಾರಿಕೆ ಇಲಾಖೆಗೆ ಸೇರಿದ್ದ ಜಾಗದ ಬಗ್ಗೆ ಪಂಚಾಯಿತಿ ದಾಖಲೆಗಳಲ್ಲಿ ಸೇರಿಸಲು ಬರುವುದಿಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ನಿಖರವಾಗಿ ಹೇಳಲಾಗುವುದಿಲ್ಲ. ಆದರೆ ಅದು ಪಂಚಾಯಿತಿ ಜಾಗವಲ್ಲ ಎಂದು ನುಡಿಯುತ್ತಾರೆ. ಬರವಣಿಗೆಯಲ್ಲಿ ವ್ಯತ್ಯಾಸ ಆಗಿರುವುದನ್ನು 2ನೇ ಆರೋಪಿ ಮಾಡಿಲ್ಲ ಎಂದರೆ ಸಾಕ್ಷಿಯು ಅದನ್ನು ನಾನು ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ಅಲ್ಲಿರುವ ಸಹಿ ಯಾರದೆಂದು ನಾನು ಪರಿಶೀಲಿಸಿಲ್ಲ. 2ನೇ ಆರೋಪಿಯ ಸಹಿಯನ್ನು ನಾನು ಪರಿಶೀಲನೆ ಮಾಡಿಲ್ಲ. ನಾನು ಪರಿಶೀಲನೆಗೆ ಹೋದಾಗ ಪಿಡಿಓ ಯಾರು ಇದ್ದರೆಂದು ಈಗ ಮರೆತುಹೋಗಿದೆ. ಅಲ್ಲಿರುವ ಸಹಿ 2ನೇ ಆರೋಪಿಯದ್ದಲ್ಲ ಎಂದರೆ ನನಗೆ ಗೊತ್ತಿಲ್ಲ.

***<u>ಮರುವಿಚಾರಣೆ</u>: ಇರುವುದಿಲ್ಲ.***

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***